ಕಥೆ

# ಧೂಳಿಡಿದ ಪಟ



ಎಸ್. ಗಂಗಾಧರಯ್ಯ

ಕಲೆ: ವೆಂಕಟ್ರಮಣ ಭಟ್



ರೈಲ್ವೇ ಸ್ಟೇಷನ್‌ನಲ್ಲಿ ಇಳಿದ ಗದ್ದಿಗ್ಯಪ್ಪನಿಗೆ ಕಕರುಮಕರು ಹಿಡಿದಂಗಾಯ್ತು. ಇದೇನಿದು 'ಅಂಕಾಲೆ ಗುತ್ತಿಹಾಲ್ಟ್' ಅಂತ ಬರದ್ಯೆತಲ್ಲಾ ಅಂತ ದಿಗಿಲಿಗೊಳಗಾದ. ಎಲ್ಲಾದರೂ ತಪ್ಪಿ ಬೇರೆ ಕಡೆ ಇಳಿದುಬಿಟ್ಟೆನೇನೋ ಅನ್ನುವ ಅನುಮಾನಕ್ಕೊಳಗಾದ. ಈ ಹಿಂದಿನ ಯಾವೊಂದೂ ಕುರುಹೂ ಇಲ್ಲದಂತೆ ಇಡೀ ನಿಲ್ದಾಣಕ್ಕೆ ನಿಲ್ದಾಣವೇ ಬದಲಾಗಿಹೋಗಿತ್ತು. ಎತ್ತ ಕಡೆ ಹೋಗಬೇಕು ಅನ್ನುವುದು ಹೊಳೆಯದೆ ಚಣೊತ್ತು ನಿಂತಲ್ಲೇ ನಿಂತು ಬಿಟ್ಟ. ರೈಲಿನಿಂದ ಇಳಿದದ್ದೇ ಮೂರೂ ಮುಕ್ಕಾಲುಮಂದಿ. ಅವರೂ ಕಣ್ಮುಚ್ಚಿ ಕಣ್ಬಿಡುವುದರೊಳಗೆ ಪ್ಲ್ಯಾಟ್‌ಫಾರ್ಮ್‌ನಿಂದ ಯಾವಾಗಲೋ ಮಂಗಮಾಯವಾಗಿದ್ದರು. ಸ್ಟೇಷನ್ ಮಾಸ್ಟರ್ ಕೋಣೆಯ ಕಡೆಯಿಂದ ಅಸ್ಪಷ್ಟ ಮಾತುಗಳು ಹರಿದಾಡುತ್ತಿದ್ದುದನ್ನು ಬಿಟ್ಟರೆ ಮಿಕ್ಕಂತೆ ಇಡೀ ನಿಲ್ದಾಣವೇ ಬಿಕೋ ಅನ್ನುತ್ತಿತ್ತು. ಸೀದಾ ಸ್ಟೇಷನ್ ಮಾಸ್ಟರ್‌ತ್ತ ನಡೆದ ಗದ್ದಿಗ್ಯಪ್ಪ, 'ಸ್ವಾಮಿ, ಚಿಕ್ಕತೊಟ್ಲು ಹಾಲ್ಟ್' ನಲ್ಲಿ ಇಳಿಬೇಕಾಗಿತ್ತು, ಅಂದ. 'ಅಯ್ಯೋ ಅಜ್ಜಾ, ಚಿಕ್ಕ ತೊಟ್ಲು ಹಾಲ್ಟ್ ಹೋಗಿ, 'ಅಂಕಾಲೆ ಗುತ್ತಿಹಾಲ್ಟ್' ಆಗಿ ಹತ್ತು ವರ್ಷದ ಮೇಲಾಗಿ ಹೋಗ್ಯೆತೆ' ಅಂದ ತನ್ನ ತಮಿಳುಗನ್ನಡ ಮಿಶ್ರಿತ ದನಿಯಲ್ಲಿ.

ಅದೊಂದು ಪುಟ್ಟ ಸ್ಟೇಷನ್. ಈ ಮುಂಚೆ ಅಲ್ಲಿ ಎರಡೇ ಎರಡು ಪ್ಯಾಸೆಂಜರ್ ರೈಲುಗಳು ಮಾತ್ರ ನಿಲ್ಲುತ್ತಿದ್ದವು. ನಿಲ್ದಾಣದ ಎದುರಿಗೊಂದು ಪುಟ್ಟ ಕೆರೆ. ಕೆರೆಯ ಹಿಂಬದಿಗೆ ರೈಲು ಹಳಿಗಳಿಂದ ಕೊಂಚವೇ ಕೊಂಚ ದೂರಕ್ಕೊಂದು ಹಳೆಯ ಕಾಲದ ಗುಡಿಯಿತ್ತು. ಆ ಗುಡಿಗೆ ಪೂಜಾರಿಯಾಗಿ ಎತ್ತಲಿಂದಲೋ ಬಂದು ಸೇರಿಕೊಂಡಿದ್ದ ಪೂಜಾರಿಯ ಅಂಕಾಲೆ ಕಡ್ಡಿಯ ಮಹಿಮೆಯಿಂದಾಗಿ ಆ ಗುಡಿ ಕಣ್ಮುಚ್ಚಿ